ಕರ್ನಾಟಕ ಸರ್ಕಾರ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.950/2019**

ಪಿ.ಡಬ್ಲ್ಯೂಃ **8**

ಸಿ.ಡಬ್ಲ್ಯೂಃ 11

| | | |
|---|---|---|
| ಹೆಸರು | ಃ | ಜಿ ಎಸ್ ಬಾಬು |
| ತಂದೆಯ ಹೆಸರು | ಃ | ಸಿದ್ದಪ್ಪ ಜಿ ಆರ್ |
| ವಯಸ್ಸು | ಃ | 48 ವರ್ಷ |
| ಉದ್ಯೋಗ | ಃ | ಹೆಚ್ 348 |
| ವಾಸಸ್ಥಳ | ಃ | ಬೀರೂರು |

**ದಿನಾಂಕಃ 14-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

**2017** ರಿಂದ **2023** ರವರೆಗೆ ನಾನು ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಪೊಲೀಸ್ ಪೇದೆಯಾಗಿ **ಆಗಿ ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕಃ 14-03-2017 ರಂದು ನಾನು ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ಠಾಣಾ ಪ್ರಭಾರದಲ್ಲಿದ್ದಾಗ ತರೀಕೆರೆಯ ಆಹಾರ ನಿರೀಕ್ಷಕರಾದ ಚಾಸಾ-4 ರವರು 7-00 ಗಂಟೆಗೆ ಠಾಣೆಗೆ ಹಾಜರಾಗಿ ವರದಿ, ಮಹಜರ್, ವಶಪಡಿಸಿಕೊಂಡಿರುವ ಮಾಲನ್ನು ತಂದು ನೀಡಿದ್ದನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ 24/2017 ಕಲಂ 3, 4, 7 ಇಸಿ ಆಕ್ಟ ಮತ್ತು ಕಲಂ 417, ಐಪಿಸಿ ಅಡಿಯಲ್ಲಿ ಕೇಸನ್ನು ದಾಖಲಿಸಿ ಆರೋಪಿಯ ವಿರುದ್ದ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಕೊಂಡಿರುತ್ತೇನೆ. ಅದೇ ದಿನ ಚಾಸಾ-1 ರವರ ಜೊತೆ ಮಂಡರವಳ್ಳಿ ಗ್ರಾಮದ ಸರ್ವೆ ನಂ.42/3 ರಲ್ಲಿ ಖಾತೆದಾರರಾದ ಶೋಭ ಕೋಂ ಶಂಕರಪ್ಪ ರವರ ಜಮೀನಿನ ಮನೆಯಲ್ಲಿ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಅವರ ಮನೆಯಲ್ಲಿ ಶೇಖರಣೆ ಮಾಡಿಟ್ಟಿರುವ 25 ಕೆ ಜಿ ವುಳ್ಳ 70 ಮೂಟೆ ಪ್ಲಾಸ್ಟಿಕ್ ಚೀಲದಲ್ಲಿ ಅಕ್ಕಿ, ಮತ್ತು ಗೋಣಿಚೀಲದಲ್ಲಿದ್ದ 4 ಕೆಜಿ ತೊಗರಿಬೇಳೆ, ತೂಕ ಮಾಡಲು ಒಂದು ಸ್ಕೇಲ್ ಸಹ ಇದ್ದು, ಇವುಗಳನ್ನು ಅಮಾನತ್ತುಪಡಿಸಿಕೊಂಡು ರಾತ್ರಿ 8-00 ರಿಂದ 9-00

ಗಂಟೆಯವರೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ನಂತರ ಠಾಣೆಗೆ ಬಂದು ಅಮಾನತ್ತುಪಡಿಸಿಕೊಂಡ ಮಾಲನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 14/17 ರಲ್ಲಿ ನಮೂದು ಮಾಡಿ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಚಾಸಾ-12 ರವರಿಗೆ ಕಡತವನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ದೂರು ಆಗಿದ್ದು, ಸದರಿ ದಾಖಲೆಯನ್ನು ಈಗಾಗಾಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರ( ಆಗಿದ್ದು, ಸದರಿ ದಾಖಲೆಯನ್ನು ಈಗಾಗಾಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯ ನಿಪಿ-4 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಮತ್ತೊಂದು ಛಾಯಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಪ್ರಥಮ ವರ್ತಮಾನ ವರದಿ ಯಾಗಿದ್ದು, ಅದನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು. ಮಾ-1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿತರ ಪರ** ಶ್ರೀ ಎಸ್ ಎನ್ ಎಂ **ವಕೀಲರಿಂದ.**

ನನಗೆ ದೂರನ್ನು ಚಾಸಾ-1 ರವರು ಠಾಣೆಗೆ ಬಂದು ನೀಡಿರುತ್ತಾರೆ. ದೂರನ್ನು ಸ್ವೀಕರಿಸಿದ ನಂತರ ಸ್ಥಳಕ್ಕೆ ಹೋಗಿ ಭೇಟಿ ನೀಡಿದಾಗ ಸ್ಥಳದಲ್ಲಿ ಯಾರೂ ಇರಲಿಲ್ಲ.

ಮನೆಯ ಬಾಗಿಲು ತೆಗೆದಿತ್ತು. ನಾನು ಹೋಗುವ ಮುಂಚೆ ಆಹಾರ ನಿರೀಕ್ಷಕರು ಸ್ಥಳಕ್ಕೆ ಹೋಗಿ ಮಾಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಆದಾದ ನಂತರ ಅವರು ಠಾಣೆಗೆ ಬಂದು ದೂರು ನೀಡುವ ಸಮಯದಲ್ಲಿ ಆ ಸ್ಥಳದಲ್ಲಿ ಯಾರೂ ಇರಲಿಲ್ಲ. ಚಾಸಾ-2 ಮತ್ತು 3 ರವರನ್ನು ನಾವುಕರೆದಿರುವುದಿಲ್ಲ, ಅವರೇ ಬಂದಿರುತ್ತಾರೆ. ನಂತರ ನಾವು ಅವರಿಗೆ ಮಾಹಿತಿ ತಿಳಿಸಿ ಪಂಚರಾಗಿ ಬರಮಾಡಿಕೊಂಡಿರುತ್ತೇವೆ. ನಿಪಿ-3 ಮಹಜರ್ ನ್ನು ನಾನೇ ಬರೆದಿರುತ್ತೇನೆ. ಪ್ರತ್ಯಕ್ಷ ಸಾಕ್ಷಿದಾರರು ಹಾಗೂ ಮಹಜರ್ ಸಾಕ್ಷಿದಾರರು ಸ್ಥಳದ ಚಕ್ಕುಬಂದಿಯನ್ನು ಹೇಳಿರುತ್ತಾರೆ. ಹಾಲಪ್ಪ ಎಂಬುವವರು ಸ್ಥಳದ ಚಕ್ಕುಬಂದಿಯ ಬಗ್ಗೆ ವಿವರವನ್ನು ನೀಡಿದ್ದು, ಅದನ್ನು ನಾನು ನನ್ನ ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಹಾಲಪ್ಪರವರ ಸಹಿಯನ್ನು ಮಹಜರ್ ನಲ್ಲಿ ಪಡೆದುಕೊಂಡಿರುತ್ತೇನೆ. ನಿಪಿ-3 ರಲ್ಲಿ ಹಾಲಪ್ಪನವರ ಸಹಿ ಇಲ್ಲ ಎಂದರೆ ಸರಿ. ನಿಪಿ-3 ಮಹಜರ್ ನ್ನು ಚಾಸಾ-1 ರವರು ಹೇಳಿದಂತೆ ಠಾಣೆಯಲ್ಲಿಯೇ ಕುಳಿತು ತಯಾರಿಸಿರುತ್ತಿರಾ ಹಾಗಾಗಿ ಹಾಲಪ್ಪನವರ ಸಹಿ ಮಹಜರ್ ನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲಿನ ಮೇಲೆ ಮಹಜರ್ ಸಾಕ್ಷಿದಾರರು ಹಾಗೂನಿಮ್ಮ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ, ಮು. ಮಾ-1 ಮತ್ತು 2 ನ್ನು ನೀವು ಹಾಗೂ ಚಾಸಾ-1 ರವರು ಸೇರಿ ಈ ಪ್ರಕರಣಕ್ಕಾಗಿ ಸೃಷ್ಠಿ ಮಾಡಿಕೊಂಡಿರುತ್ತಿರಾ ಎಂದರೆ ಸರಿಯಲ್ಲ. ನಿಮಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಆರೋಪಿಯ ಮೇಲೆ ಸುಳ್ಳು ಪ್ರಥಮ ವರ್ತಮಾನ ವರದಿ ತಯಾರು ಮಾಡಿರುತ್ತಿರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**

ಕರ್ನಾಟಕ ಸರ್ಕಾರ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.**

ಪಿ.ಡಬ್ಲ್ಯೂಃ

ಸಿ.ಡಬ್ಲ್ಯೂಃ

| | | |
|---|---|---|
| ಹೆಸರು | ಃ | ಹನುಮನಾಯ್ಕ |
| ತಂದೆಯ ಹೆಸರು | ಃ | ನಾಗ್ಯನಾಯ್ಕ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ಮುಖ್ಯ ಪೇದೆ |
| ವಾಸಸ್ಥಳ | ಃ | ಲಿಂಗದಹಳ್ಳಿ |

**ದಿನಾಂಕಃ 23-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

_**5**ನೇ ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ದಿಃ **28-07-2014** ರಿಂದ ಇಲ್ಲಿಯತನಕ ನಾನು ಲಿಂಗದಹಳ್ಳಿ **ಪೋಲೀಸ್ ಠಾಣೆಯಲ್ಲಿ** ಮುಖ್ಯ ಪೇದೆಯಾಗಿ **ಆಗಿ ಕರ್ತವ್ಯ** ನಿರ್ವಹಿಸುತ್ತಿದ್ದೇನೆ.

ದಿನಾಂಕಃ 05-10-2019 ರಂದು ನಾನು ಲಿಂಗದಹಳ್ಳಿ ಪೊಲೀಸ್ ಠಾಣೆಯಲಿಃ ಎಸ್ ಹೆಚ್ ಓ ಕರ್ತವ್ಯದಲ್ಲಿದ್ದಾಗ ಠಾಣಾ ಸರಹದ್ದಿನ ಹುಲಿತಿಮ್ಮಾಪುರ ರಸ್ತೆಯಲ್ಲಿ ಲೋಕೇಶಪ್ಪ ಎಂಬುವವರು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದವರನ್ನು ಚಾಸಾ-1 ರವರು ವಶಕ್ಕೆ ಪಡೆದು ವರದಿಯನ್ನು ತಯಾರಿಸಿ, ಚಾಸಾ-6 ರವರ ಹಸ್ತ ಪ್ರಕರಣ ದಾಖಲಿಸುವಂತೆ ಕಳುಹಿಸಿಕೊಟ್ಟಿದ್ದನ್ನು ಮಧ್ಯಾಹ್ನ 12-15 ಗಂಟೆಗೆ ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ 65/2019 ಕಲಂ 32, 34 ಕೆ ಇ ಆಕ್ಟ್ ಅಡಿಯಲ್ಲಿ ಕೇಸನ್ನು ದಾಖಲಿಸಿ ಆರೋಪಿಯ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಚಾಸಾ-6 ರವರ ಹಸ್ತ ನ್ಯಾಯಾಲಯಕ್ಕೆ ನಿವೇದಿಕೊಂಡಿರುತ್ತೇನೆ.

ದಿನಾಂಕಃ 05-05-2021 ರಂದು ದೋರನಾಳು ಗ್ರಾಮದ 1ನೇ ಆರೋಪಿಯ ಮನೆಯ ಮುಂದೆ ಚಾಸಾ-1 ರವರ ಸೂಚನೆ ಮೇರೆಗೆ ಮಹಜರ್ ಕ್ರಮವನ್ನು ನನ್ನ ಸ್ವಹಸ್ತದಿಂದ ಮಧ್ಯಾಹ್ನ 3-15 ರಿಂದ 4-15 ರವರೆಗೆ ಬರೆದಿರುತ್ತೇನೆ.

ನಾನು ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿದ್ದಾಗ ರಾತ್ರಿ 10-00 ಗಂಟೆಗೆ ಬರಗೇನಹಳ್ಳಿ ವಾಸಿ ಜಯಣ್ಣ ಎಂಬುವವರು ಅವರ ಮನೆಯ ಮುಂದೆ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾನೆ ಎಂಬ ಖಚಿತ ಮಾಹಿತಿ ಬಂದ ಮೇರೆಗೆ ನಾನು ಮತ್ತು ಠಾಣಾ ಸಿಬ್ಬಂಧಿಗಳಾದ ಚಾಸಾ-4 ರಿಂದ 6 ರವರನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ರಾತ್ರಿ 10-40 ಗಂಟೆಗೆ ಠಾಣೆಯನ್ನು ಬಿಟ್ಟು 10-50 ಗಂಟೆ ಸಮಯಕ್ಕೆ ರಂಗೇನಹಳ್ಳಿಗೆ ತಲುಪಿ ಅಲ್ಲಿ ರಸ್ತೆಯ ಬಳಿ ಇದ್ದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಈ ಪ್ರಕರಣದ ವಿದ್ಯಮಾನವನ್ನು ತಿಳಿಸಿ ಅವರಿಗೆ ಪಂಚರಾಗುವಂತೆ ಕೋರಿ ಅವರು ಒಪ್ಪಿದ ಮೇರೆಗೆ ಅವರನ್ನು ಸಹ ನಮ್ಮ ಇಲಾಖಾ ಜೀಪಿನಲ್ಲಿ ಕರೆದುಕೊಂಡು ರಾತ್ರಿ 11-15 ಕ್ಕೆ ಬರಗೇನಹಳ್ಳಿಯಲ್ಲಿರುವ ಜಯಣ್ಣನವರ ಮನೆಯ ಮುಂದೆ ಇಲಾಖಾ ಜೀಪ್ ನ್ನು ನಿಲ್ಲಿಸಿ, ನಮ್ಮ ಜೀಪಿನ ಮುಂಭಾಗದಲ್ಲಿ ಒಬ್ಬ ವ್ಯಕ್ತಿ ಪ್ಲಾಸ್ಟಿಕ್ ಕವರನ್ನು ಹಿಡಿದು ನಿಂತಿದ್ದು, ನಮ್ಮ ಇಲಾಖಾ ಜೀಪನ್ನು ನೋಡಿ ಅಲ್ಲಿಂದ ಓಡಿ ಹೋಗಲು ಪ್ರಯತ್ನಿಸಿರುತ್ತಾನೆ. ಆಗ ನಮ್ಮ ಸಿಬ್ಬಂಧಿಗಳಾದ ಚಾಸಾ-4 ರಿಂದ 6 ರವರು ಆತನನ್ನು ಹಿಡಿದು ನನ್ನ ಬಳಿ ಹಾಜರುಪಡಿಸಿರುತ್ತಾರೆ.

ಆನಂತರ ಆತನ ಹೆಸರು, ವಿಳಾಸ ಕೇಳಲಾಗಿ ಜಯಣ್ಣ , ಬರಗೇನಹಳ್ಳಿ ವಾಸಿ ಎಂಬುದಾಗಿ ತಿಳಿಸಿರುತ್ತಾನೆ. ಪಂಚರ ಸಮಕ್ಷಮ ಆತನ ಬಳಿ ಇದ್ದ ಪ್ಲಾಸ್ಟಿಕ್ ಕವರನ್ನು ಪರಿಶೀಲಿಸಲಾಗಿ ಅದರೊಳಗೆ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ವಿಸ್ಕಿಯ 78 ಪೌಚುಗಳು

ಇದ್ದು, ಅದರ ಬಗ್ಗೆ ತಮಗೇನಾದರೂ ಪರವಾನಗಿ ಇದೆಯೇ ಎಂದು ಕೇಳಲಾಗಿ ಆರೋಪಿಯು ಯಾವುದೇ ಪರವಾನಗಿ ಇಲ್ಲ ಎಂದು ತಿಳಿಸಿದ್ದು, ನಂತರ ಪಂಚರ ಸಮಕ್ಷಮ ಸದರಿ ಮುದ್ದೆ ಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸ್ಥಳ/ಅಮಾನತ್ತು ಪಂಚನಾಮೆಯನ್ನು ರಾತ್ರಿ 11-30 ರಿಂದ 12-30 ಗಂಟೆಯವರೆಗೆ ಬರೆಯಲಾಯಿತು.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ಈಗಾಗಾಲೇ ನಿಪಿ-2 ಎಂದು ಗುರುತಿಸ ಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ವಕೀಲರಿಂದ.**

ನಾನು ಘಟನ ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮವನ್ನು ನನ್ನ ಸ್ವಹಸ್ತದಿಂದ ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ಮಹಜರನ್ನು ನಾನು ಠಾಣೆಯಲ್ಲಿಯೇ ಸೃಷ್ಠಿ ಮಾಡಿದ್ದೇನೆಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**

**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.**

ಪಿ.ಡಬ್ಲ್ಯೂಃ

ಸಿ.ಡಬ್ಲ್ಯೂಃ

ಹೆಸರು ಃ

ತಂದೆಯ ಹೆಸರು ಃ

ವಯಸ್ಸು ಃ 37 ವರ್ಷ

ಉದ್ಯೋಗ ಃ ಪಿಸಿ 268

ವಾಸಸ್ಥಳ ಃ

**ದಿನಾಂಕಃ 16-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

5ನೇ ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ನಾನು 2017 ರಿಂದ ಇಲ್ಲಿಯತನಕ ನಾನು ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಪೊಲೀಸ್ ಪೇದೆಯಾಗಿ **ಆಗಿ ಕರ್ತವ್ಯ** ನಿರ್ವಹಿಸುತ್ತಿದ್ದೇನೆ.

ದಿನಾಂಕಃ 08-03-2019 ರಂದು

ನಾನು ಲಕ್ಕವಳ್ಳಿ ಪೆಲೀಸ್ ಠಾಣೆಯಲ್ಲಿದ್ದಾಗ ರಾತ್ರಿ 10-00 ಗಂಟೆಗೆ ಬರಗೇನಹಳ್ಳಿ ವಾಸಿ ಜಯಣ್ಣ ಎಂಬುವವರು ಅವರ ಮನೆಯ ಮುಂದೆ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾನೆ ಎಂಬ ಖಚಿತ ಮಾಹಿತಿ ಬಂದ ಮೇರೆಗೆ ನಾನು ಮತ್ತು ಠಾಣಾ ಸಿಬ್ಬಂಧಿಗಳಾದ ಚಾಸಾ-4 ರಿಂದ 6 ರವರನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ರಾತ್ರಿ 10-40 ಗಂಟೆಗೆ ಠಾಣೆಯನ್ನು ಬಿಟ್ಟು 10-50 ಗಂಟೆ ಸಮಯಕ್ಕೆ ರಂಗೇನಹಳ್ಳಿಗೆ ತಲುಪಿ ಅಲ್ಲಿ ರಸ್ತೆಯ ಬಳಿ ಇದ್ದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಈ ಪ್ರಕರಣದ ವಿದ್ಯಮಾನವನ್ನು ತಿಳಿಸಿ

ಅವರಿಗೆ ಪಂಚರಾಗುವಂತೆ ಕೋರಿ ಅವರು ಒಪ್ಪಿದ ಮೇರೆಗೆ ಅವರನ್ನು ಸಹ ನಮ್ಮ ಇಲಾಖಾ ಜೀಪಿನಲ್ಲಿ ಕರೆದುಕೊಂಡು ರಾತ್ರಿ 11-15 ಕ್ಕೆ ಬರಗೇನಳ್ಳಿಯಲ್ಲಿರುವ ಜಯಣ್ಣನವರ ಮನೆಯ ಮುಂದೆ ಇಲಾಖಾ ಜೀಪ್ ನ್ನು ನಿಲ್ಲಿಸಿ, ನಮ್ಮ ಜೀಪಿನ ಮುಂಭಾಗದಲ್ಲಿ ಒಬ್ಬ ವ್ಯಕ್ತಿ ಪ್ಲಾಸ್ಟಿಕ್ ಕವರನ್ನು ಹಿಡಿದು ನಿಂತಿದ್ದು, ನಮ್ಮ ಇಲಾಖಾ ಜೀಪನ್ನು ನೋಡಿ ಅಲ್ಲಿಂದ ಓಡಿ ಹೋಗಲು ಪ್ರಯತ್ನಿಸಿರುತ್ತಾನೆ.

ಆಗ ನಮ್ಮ ಸಿಬ್ಬಂಧಿಗಳಾದ ಚಾಸಾ-4 ರಿಂದ 6 ರವರು ಆತನನ್ನು ಹಿಡಿದು ನನ್ನ ಬಳಿ ಹಾಜರುಪಡಿಸಿರುತ್ತಾರೆ.

ಆನಂತರ ಆತನ ಹೆಸರು, ವಿಳಾಸ ಕೇಳಲಾಗಿ ಜಯಣ್ಣ , ಬರಗೇನಹಳ್ಳಿ ವಾಸಿ ಎಂಬುದಾಗಿ ತಿಳಿಸಿರುತ್ತಾನೆ. ಪಂಚರ ಸಮಕ್ಷಮ ಆತನ ಬಳಿ ಇದ್ದ ಪ್ಲಾಸ್ಟಿಕ್ ಕವರನ್ನು ಪರಿಶೀಲಿಸಲಾಗಿ ಅದರೊಳಗೆ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ವಿಸ್ಕಿಯ 78 ಪೌಚುಗಳು ಇದ್ದು, ಅದರ ಬಗ್ಗೆ ತಮಗೇನಾದರೂ ಪರವಾನಗಿ ಇದೆಯೇ ಎಂದು ಕೇಳಲಾಗಿ ಆರೋಪಿಯು ಯಾವುದೇ ಪರವಾನಗಿ ಇಲ್ಲ ಎಂದು ತಿಳಿಸಿದ್ದು, ನಂತರ ಪಂಚರ ಸಮಕ್ಷಮ ಸದರಿ ಮುದ್ದೆ ಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸ್ಥಳ/ಅಮಾನತ್ತು ಪಂಚನಾಮೆಯನ್ನು ರಾತ್ರಿ 11-30 ರಿಂದ 12-30 ಗಂಟೆಯವರೆಗೆ ಬರೆಯಲಾಯಿತು.

ಆರೋಪಿಯನ್ನು ಮತ್ತು ಆರೋಪಿಯಿಂದ ಅಮಾನತ್ತುಪಡಿಸಿಕೊಳ್ಳಲಾದ ಮುದ್ದೆಮಾಲುಗಳನ್ನು ಠಾಣೆಯಲ್ಲಿ ಎಸ್ ಹೆಚ್ ಒ ಮುಂದೆ ಹಾಜರುಪಡಿಸಿ ಮುಂದಿನ ತನಿಖೆಗಾಗಿ ಒಪ್ಪಿಸಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ವರದಿಯಾಗಿದ್ದು, ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ/ಅಮಾನತ್ತು ಪಂಚನಾಮೆಯಾಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮುದ್ದೆ ಮಾಲಾದ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ವಿಸ್ಕಿಯ 73 ಪೌಚುಗಳನ್ನು ನೋಡಿ ಗುರುತಿಸಿದ್ದು, ಸದರಿ ಮುದ್ದೆ ಮಾಲುಗಳನ್ನು ಎಂ ಓ-1 ರಿಂದ ಎಂ ಓ 73 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿತರ ಪರ</u>** <u>ಶ್ರೀ ಡಿ ಸಿ ಪಿ</u> **<u>ವಕೀಲರಿಂದ.</u>**

ನಾವು ಧಾಳಿ ಮಾಡಿದೆವು ಎಂದು ಹೇಳುವ ಸಮಯವು ಕತ್ತಲಾಗಿತ್ತು ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರಿದು ಅಲ್ಲಿ ದೀಪ ಇತ್ತು ಮತ್ತು ಇಲಾಖಾ ಜೀಪಿನ ಮುಂಭಾಗದ ಲೈಟ್ ಸಹ ಇತ್ತು ಎಂದು ಸಾಕ್ಷ್ಯ ನುಡಿಯುತ್ತಾರೆ. ನಿಪಿ-5 ರ ವರದಿಯಲ್ಲಿ ಧಾಳಿ ಮಾಡಿದ ಸ್ಥಳದಲ್ಲಿ ವಿದ್ಯುತ್ ದೀಪ ಇದ್ದ ಬಗ್ಗೆ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಬರಗೇನಹಳ್ಳಿಯಲ್ಲಿ ನಾವು ಧಾಳಿ ಮಾಡಿದ ಸ್ಥಳದ ಅಕ್ಕಪಕ್ಕದಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿ. ಅಕ್ಕಪಕ್ಕದ ಮನೆಯವರನ್ನು ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಚಾಸಾ-4 ರಿಂದ 6 ರವರು ಆರೋಪಿಯನ್ನು ಹಿಡಿದಿರುತ್ತಾರೆ. ಪೌಚು ಮತ್ತು ಸೀಸೆಗೆ ವ್ಯತ್ಯಾಸ ಇದೆ ಎಂದರೆ ಸರಿ. ಮುದ್ದೆ ಮಾಲುಗಳ ಬಗ್ಗೆ ವರದಿ ಮತ್ತು ಮಹಜರ್ ನಲ್ಲಿ ಅದರ ಬ್ಯಾಚ್ ನಂಬರ್ ಮತ್ತು ಮ್ಯಾನುಪ್ಯಾಕ್ಚರ್ ಡೇಟ್ ನ್ನು ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ನನ್ನ ಸಾಕ್ಷ್ಯದಲ್ಲಿ ಹೇಳಿದ ಹಾಗೆ ಆ ದಿನ ಯಾವುದೇ ಧಾಳಿ ಮಾಡಿಲ್ಲ ಆರೋಪಿ ಕಡೆಯಿಂದ ಯಾವುದೇ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ರಿಂದ 73 ರ ತರಹ ಪೌಚುಗಳು ಮದ್ಯದ ಅಂಗಡಿಗಳಲ್ಲಿ ದೊರೆಯುತ್ತದೆ ಎಂದರೆ ಸರಿ. ಸ್ಥಳ ಮಹಜರ್ ಪಂಚನಾಮೆಗೆ ಅಕ್ಕಪಕ್ಕದ ಮನೆಯವರನ್ನು ಕರೆದು ಸಾಕ್ಷಿಗಳಾನಾಗಿ ಸಹಿ ಮಾಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಆ ದಿನ ಚಾಸಾ-4 ರಿಂದ 6 ರವರ ಜೊತೆ ಬರಗೇನಹಳ್ಳಿಗೆ ಹೋಗಿಲ್ಲ, ಯಾವುದೇ ರೀತಿಯ ಧಾಳಿ ಮಾಡಿಲ್ಲ, ಆರೋಪಿಯು ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ ಆತನ ವಿರುದ್ದ ಸುಳ್ಳು

ವರದಿಯನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದಲ್ಲಿ ನಾನು ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ಈಗಾಗಾಲೇ ನಿಪಿ-2 ಎಂದು ಗುರುತಿಸ ಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿತರ ಪರ** ಶ್ರೀ **ವಕೀಲರಿಂದ.**

**ಮರುವಿಚಾರಣೆ:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**